Rotary

# JASMINE

ಜಾಸ್ಮಿನ್ | जास्मिन

UNITE FOR GOOD

WEEKLY BULLETIN OF ROTARY CLUB KUNDAPURA SOUTH

Charter No. 23496 | Zone 1, R. I. Dist. 3182 | Charter Date : 04-03-1986



**Rtn. Francesco Arezzo**
RI President




**Rtn. Palaksha K.**
Dist. Governor



**Rtn. PHF. I. Narayana**
Asst. Governor



**Rtn. Koushik Yadiyal**
Zonal Lieutenant



**Rtn. Sachin Nackathaya**
President



**Rtn. Gerald Crasto**
Secretary



**Rtn. Ramananda Karanth**
Bulletin Editor



40h year of Service and Fellowship

Volume 40 Issue - 29 21st January 2026

## CLUB ASSEMBLY

Time : 08.10 a.m.
Venue : Residence of Rtn. Dr. Umesh Puthran

We meet every Thursday at 7-30 p.m.
at Sarojini Madhusoodhan D. Kushe Rotary South Hall, Kundapura

## ಸಂಪಾದಕೀಯ :



ರೋಟರಿ ಮಿತ್ರರೇ,

ಇಂದು ಬೆಳಗ್ಗಿನ ಜಾವ ಛಳಿಯಲ್ಲಿ ನಡುಗುವಾಗ ಮೊನ್ನೆ ತಾನೆ ನಾನು ಅಮೆಜಾನ್ ಪ್ರೈಮ್‌ನಲ್ಲಿ ನೋಡಿದ 120 ಬಹಾದ್ದೂರ್ ಎನ್ನುವ ಭಾರತ ಚೈನಾ ಯುದ್ಧದ ಸಮಯದಲ್ಲಿನ ನೈಜ ಕಥೆ ನೋಡಿದ ನೆನಪಾಯಿತು. 24 ಡಿಗ್ರಿ ಹವಾಮಾನದಲ್ಲಿ ನಮ್ಮ ಕೇವಲ 120 ಸೈನಿಕರು ಮೇಜರ್ ಶೈತಾನ್ ಸಿಂಘ್ ಭಾಟಿಯ ನೇತೃತ್ವದಲ್ಲಿ ರೆಝಿಂಗ್ಲಾ ಪಾಸ್‌ನಲ್ಲಿ 3500 ಸೈನಿಕರನ್ನು ಹತಮಾಡಿದ ನಮ್ಮ ಹುತಾತ್ಮ 120 ಸೈನಿಕರ ಕಥೆ ಮೈ ರೋಮಾಂಚನವಾಗುವಂತಹುದು. ಭಾರತ ಸರಕಾರ ಮೇಜರ್ ಶೈತಾನ್ ಸಿಂಘ್ ಭಾಟಿಗೆ ಪರಮವೀರ ಚಕ್ರ ನೀಡಿ ಗೌರವಿಸಿತು ಹಾಗೂ ಇನ್ನಿತರರಿಗೆ ವೀರ ಚಕ್ರಗಳನ್ನು ನೀಡಿ ಗೌರವಿಸಿತು. ರೆಝಿಂಗ್ಲಾ ಪಾಸ್‌ನ ಎತ್ತರದ ಶಿಖರದಲ್ಲಿ ಎಲ್ಲಾ 120 ಸೈನಿಕರ ಹೆಸರಿನ ಸ್ಮಾರಕವನ್ನು ನಿರ್ಮಿಸಿದ್ದಾರೆ. ಇದಕ್ಕೆ ಏಕೆ ಮಹತ್ವ? ಎಂದರೆ ಅಂದು ಈ ಚಾರ್ಲಿ ಬೆಟಾಲಿಯನ್‌ಗೆ ಬ್ರಿಗೇಡಿಯರ್‌ನಿಂದ ಕರೆ ಬರುತ್ತದೆ. ನಿಮ್ಮ ಸೈನ್ಯಕ್ಕೆ 3500 ಸೈನಿಕರನ್ನು ಎದುರಿಸಲು ಅಸಾಧ್ಯ. ಹಿಂದೆ ಬನ್ನಿ.. ನಂತರ ಹೆಡ್ ಕ್ವಾರ್ಟರ್ಸ್‌ನಿಂದ ಹೆಚ್ಚಿಗೆ ಫೋರ್ಸ್ ಬಂದ ನಂತರ ಎದುರಿಸೋಣ ಎಂದಾಗ ಈ ಮೇಜರ್ ಹಾಗೂ ಅವನ ಸೈನ್ಯ ಈಗ ಅವರನ್ನು ರೆಝಿಂಗ್ಲಾ ಪಾಸ್ ದಾಟಲು ಬಿಟ್ಟರೆ ಅವರ ಯೋಜನೆ ಜಮ್ಮು ಮತ್ತು ಕಾಶ್ಮೀರ ವಶ ಪಡಿಸಿಕೊಳ್ಳುವುದು ನಾವು ನಮ್ಮ ಪ್ರಾಣವನ್ನು ಒತ್ತೆ ಇಟ್ಟಾದರೂ ಅವರ ಯೋಜನೆ ಯಶಸ್ವಿ ಆಗಲು ಬಿಡುವುದಿಲ್ಲ ಸಮಯ ಕೇವಲ ಇನ್ನು ಮೂರು ಗಂಟೆ ಮಾತ್ರ ಉಳಿದಿರುವುದು ನಾವು ಹೋರಾಡುತ್ತೇವೆ ಎಂದು ಪ್ರಾಣದ ಹಂಗು ತೊರೆದು ಹೋರಾಡಿ ಎಲ್ಲಾ ಮೂರು ಸಾವಿರ ಸೈನಿಕರನ್ನು ಕೊಂದು ಹುತಾತ್ಮರಾದರು. ಇಂದಿನ ಜಮ್ಮು ಕಾಶ್ಮೀರ ಅಂದು ಇವರ ಬಲಿದಾನದ ಕೊಡುಗೆ ಆಗಿದೆ. ಅಂದಿನ ಯುದ್ಧದ ಸಂದರ್ಭದಲ್ಲಿ ಆ ಮೇಜರ್ ಬರೆದ ಡೈರಿಯಲ್ಲಿ ಬರೆದ ನೋಟ್‌ನಲ್ಲಿ ಹೇಗಿತ್ತು ಎಂದರೆ ಅಂದು ಆ ಕೊರೆಯುವ ಚಳಿಯಲ್ಲಿ ಸರಿಯಾದ ಬೂಟು, ಹೊದೆಯಲು ರಗ್ಗು, ಸ್ವೆಟರ್ ಹಾಗೂ ಆಹಾರ ಕೂಡ ಇರಲಿಲ್ಲ ಚೈನಾ ಕ್ಯಾಂಪ್ನಲ್ಲಿ ಥ್ರೀ ಸ್ಟಾರ್ ಕೆಫೆ ತರ ಊಟದ ವ್ಯವಸ್ಥೆ, ಅತ್ಯಂತ ಮಾದರಿಯ ಆಯುಧಗಳು, ಸ್ವೆಟರ್ಸ್, ರಗ್ಗು ಇತ್ಯಾದಿ ಎಂದು ದುಃಖದಲ್ಲಿ ಬರೆದಿದ್ದರು. ಇಂದು ಬೆಳಿಗ್ಗೆ ಇವರ ತ್ಯಾಗ ಬಲಿದಾನದ ನೆನಪಾಗಿ ಎರಡು ಅಶ್ರುಗಳನ್ನಷ್ಟೇ ಅವರಿಗೆ ಸಮರ್ಪಿಸಲು ಸಾಧ್ಯವಾಯಿತು. ಇನ್ನಾದರೂ ನಮ್ಮ ಇತಿಹಾಸ ಪಾಠದಲ್ಲಿ ಸತ್ಯ ವಿಚಾರಗಳ ಉಲ್ಲೇಖವಾಗಲಿ ಎಂಬುದು ನನ್ನ ಹಾರೈಕೆ. **– ರೊ. ರಮಾನಂದ ಕಾರಂತ**

## ವಾರದ ಸಭೆಯ ವರದಿ




ತಾರೀಕು 15 ಜನವರಿ ಗುರುವಾರ ನಡೆದ ನಮ್ಮ ವಾರದ ಸಭೆಗೆ ಈ ಪ್ರಾಂತ್ಯದ ಪ್ರಸಿದ್ಧ ದೈವಸ್ಥಾನಗಳ ವಿನ್ಯಾಸಗಾರ ಕುಂದಾಪುರದ ಇಂಜಿನಿಯರ್ ಶ್ರೀ ದಿನೇಶ್ ಹೆಗಡೆ ಅವರು ಅತಿಥಿಗಳಾಗಿ ಆಗಮಿಸಿ, ದೇವಸ್ಥಾನ ಹಾಗೂ ದೈವಸ್ಥಾನ ಇವೆರಡರ ನಿರ್ಮಾಣದಲ್ಲಿರುವ ವ್ಯತ್ಯಾಸಗಳನ್ನು, ಆಯಗಳನ್ನು ಯಾವ ರೀತಿ ನಿರ್ಮಿಸಬೇಕು, ವಾಸ್ತು ಯಾವ ರೀತಿ ಇರಬೇಕು ಹಾಗೂ ಪ್ರತಿಷ್ಠಾಪಿತ ಮೂರ್ತಿಗಳಲ್ಲಿ ಮರದಲ್ಲಿ ನಿರ್ಮಿತವಾದ ಮೂರ್ತಿಗಳಿಗೂ, ಶಿಲಾಮೂರ್ತಿಗಳಿಗೂ ಇರುವ ವಿಶೇಷತೆಗಳನ್ನು ಉದಾಹರಣೆ ಸಮೇತವಾಗಿ ವಿವರಿಸಿದ್ದರು. ಅಧ್ಯಕ್ಷ ರೊ. ಸಚಿನ್ ನಕ್ಕತಾಯ ಆಗಮಿಸಿದ ಸರ್ವರನ್ನು ಸ್ವಾಗತಿಸಿದರು. ರೊ. ಜೆರಾಲ್ಡ್ ಕ್ರಾಸ್ತಾ ವಾರದ ವರದಿ ವಾಚಿಸಿದರು. ರೊ ಶ್ರೀನಿವಾಸ ಶೇಟ್ ಪ್ರಾರ್ಥನೆಯನ್ನು ನೆರವೇರಿಸಿದರು. ರೊ. ದೋಮ ಚಂದ್ರಶೇಖರ್ ವಾರದ ಚಿಂತನೆಯನ್ನು ಮಂಡಿಸಿದರು. ರೊ ಕೆ. ಕೆ. ಕಾಂಚನ್ ರೋಟರಿ ಮಾಹಿತಿ ನೀಡಿದರು. ರೊ. ಡಾ. ಉತ್ತಮ್ ಕುಮಾರ್ ಶೆಟ್ಟಿ ಕಾರ್ಯಕ್ರಮದ ಕೊನೆಯ ಹಾಸ್ಯವನ್ನು ನಡೆಸಿಕೊಟ್ಟರು. ರೊ. ರಮಾನಂದ ಕಾರಂತ್ ಆಗಮಿಸಿದ ಅತಿಥಿಗಳ ಪರಿಚಯ ಮಾಡಿದರು. ರೊ. ಸತ್ಯನಾರಾಯಣ ಪುರಾಣಿಕ್ ಕಾರ್ಯಕ್ರಮದ ಕೊನೆಯಲ್ಲಿ ಧನ್ಯವಾದಗಳು ಅರ್ಪಿಸಿದರು.

## ಶಂಕರಾಚಾರ್ಯರ ವಿವೇಕ ಚೂಡಾಮಣಿಗೆ ಸ್ವಾಮಿ ರಂಗನಾಥಾನಂದರ ದೃಷ್ಟಾಂತಗಳು–113

**ಸೂಕ್ಷ್ಮ ಶರೀರ ಭಾಗ – 3**

ನಾವು ಮಾಡುವ ಕರ್ಮಗಳಿಗೂ ಇದೇ ಆಗುತ್ತದೆ. ನಾವು ಯಾವುದನ್ನು ಬಿಟ್ಟುಬಿಡಲು ಪ್ರಯತ್ನಿಸುತ್ತೇವೆಯೋ ಆ ಕರ್ಮವು ನಮ್ಮೊಳಗೆ ಅಚ್ಚಾಗಿರುವ ಅದರ ಭಾವದ ದೆಸೆಯಿಂದ ನಮ್ಮನ್ನು ಹಿಡಿದುಕೊಂಡಿರುತ್ತದೆ. ಹುಕ್ಕ ಸೇದುವುದನ್ನು ಕೆಲವರು ಬಿಡಲು ಇಚ್ಛಿಸಿದರೂ ಹುಕ್ಕವು ಅವರನ್ನು ಬಿಡುವುದಿಲ್ಲ. ಈ ರೀತಿಯ ದುರಭ್ಯಾಸಗಳು ನಮ್ಮನ್ನು ಅವುಗಳ ದಾಸರನ್ನಾಗಿಸಿಬಿಡುತ್ತವೆ. ಪೂರ್ವಕರ್ಮ ಗಳ ಭಾವಗಳು ನಾವು ಎದುರಿಸಲಾಗದಷ್ಟು ಬಲವಾಗಿರುತ್ತವೆ ಹಾಗೂ ನಮ್ಮ ಜೀವನದ ದಿನನಿತ್ಯದ ಕಾರ್ಯದ ಹಾದಿಯನ್ನು ನಿಯಂತ್ರಿಸುತ್ತವೆ. ಆದ್ದರಿಂದ ಈ ಕರ್ಮಭಾವಗಳ ನಿರ್ವಹಣೆಯೇ ನಿಜವಾದ ಶಿಕ್ಷಣವಾಗಿದ್ದು, ಕೇವಲ ಪುಸ್ತಕಗಳನ್ನು ಓದುವುದ ರಿಂದಾಗಲೀ ಶೈಕ್ಷಣಿಕ ಯಶಸ್ಸಿನಿಂದಾಗಲೀ ಈ ಅನುಭವ ಸಿಗುವುದಿಲ್ಲ. ಸತ್ಕಾರ್ಯಗಳನ್ನು ಮಾಡುವುದರಿಂದಲೂ ಅವುಗಳ ಭಾವಗಳ ಖಜಾನೆಯನ್ನು ನಿರ್ಮಿಸುವುದರಿಂದಲೂ ನಮ್ಮ ವ್ಯಕ್ತಿತ್ವದ ಬೆಳವಣಿಗೆಯಾಗಿ ಭವಿಷ್ಯವನ್ನು ನಾವೇ ನಿಯಂತ್ರಿಸಬಹುದು. ಈ ಭಾವಗಳೇ ನಮ್ಮ ಮುಂದಿನ ಜೀವನದ ಅನುಭವಗಳಾಗುವುವು. ಸತ್ಕಾರ್ಯಗಳು ಒಳ್ಳೆಯ, ದುಷ್ಕೃತ್ಯಗಳು ಕೆಟ್ಟ ಅನುಭವಗಳನ್ನು ತರುತ್ತವೆ. ಆದ್ದರಿಂದ ಸೂಕ್ಷ್ಮ ಶರೀರವು ಆತ್ಮಕ್ಕೆ ಹಿಂದಿನ ಕರ್ಮಗಳ ಅನುಭವ ನೀಡುತ್ತದೆ.

ಈಗ, ಇಷ್ಟೆಲ್ಲಾ ವೈಶಿಷ್ಟ್ಯ ಗಳಿರುವ ಸೂಕ್ಷ್ಮ ಶರೀರವೇ ನಮ್ಮ ನೈಜ ಸ್ವರೂಪವೇ? ಮೇಲಿನ ಶ್ಲೋಕದ ಪ್ರಕಾರ, ಅನಾದಿ ಕಾಲದಿಂದಲೂ ತನ್ನ ಅಜ್ಞಾನದಿಂದ ಸೂಕ್ಷ್ಮ ಶರೀರವು ಆತ್ಮನ ಹೊರಕವಚ ಅಂದರೆ ಉಪಾಧಿಯಾಗಿದೆ. ಇದು ಆತ್ಮನ ಹೊರಕವಚವಾಗಿದ್ದು ಯಾವಾಗಿನಿಂದ ಎಂದು ಹುಡುಕುತ್ತಾ ಹೊರಟರೆ ಕೊನೆಯಿಲ್ಲದ ಹಿಂದಿನ ಜನ್ಮ ಗಳಿಗೆ ಹೋಗಬಹುದೇ ಹೊರತು ಆ ನಿರ್ದಿಷ್ಟ ಕಾಲವನ್ನು ಹುಡುಕುವುದು ಅಸಾಧ್ಯ. ಆದ್ದರಿಂದ ಈ ಉಪಾಧಿಯು ಅನಾದಿ. ಅದು ಅನಾದಿಯಾದರೂ ಅದಕ್ಕೆ ಕೊನೆಯಿದೆ, ನಾವದನ್ನು ನಾಶಮಾಡಬಹುದು. ಇದೊಂದು ಅದ್ಭುತ ಸತ್ಯ. ಉದಾಹರಣೆಗೆ ಒಂದು ಗುಹೆಯೊಳಗೆ ಅದರ ರಚನೆಯಾದ ಕಾಲದಿಂದಲೂ ಸಂಪೂರ್ಣ ಕತ್ತಲೆ ಇತ್ತು ಎಂದು ಕೊಳ್ಳಿ, ಅಂದರೆ ನಕ್ಷತ್ರಗಳು ಸ್ಫೋಟ ಗೊಂಡು ಗ್ರಹಗಳು ಆದ ಸಮಯದಿಂದಲೂ. ಈ ಕತ್ತಲು ಅನಾದಿ ಎನ್ನಬಹುದಾದರೂ, ನಾವು ಅದರೊಳಗೆ ಹೋಗಿ ಒಂದು ಬೆಂಕಿಕಡ್ಡಿಯನ್ನು ಹಚ್ಚಿದ ತಕ್ಷಣ ಅಂಧಕಾರ ಮಾಯವಾಗುತ್ತದೆ. ಹೀಗೆಯೇ ಅನಾದಿಯಾಗಿದ್ದರೂ ಕೂಡಲೇ ಆತ್ಮನನ್ನು ಸುತ್ತುವರಿದಿರುವ ಹೊರಕವಚಕ್ಕೆ ಆತ್ಮಜ್ಞಾನದ ಬೆಳಕನ್ನು ನೀಡಬಹುದು.

ಮತ್ತು ಯಾವಾಗ ನಮ್ಮಲ್ಲಿ ಈ ಜ್ಞಾನವಿರುವುದೋ ವಾಸನಾ ಅಥವಾ ಸಂಸ್ಕಾರಗಳು ನಮ್ಮ ಮೇಲೆ ಯಾವ ಹಿಡಿತವನ್ನೂ ಸಾಧಿಸಲಾರವು. ಭಗವಾನ್ ರಾಮಕೃಷ್ಣರು ಇದರ ಬಗ್ಗೆ ಒಂದು ಸುಂದರ ವಾದ ವಿಶ್ಲೇಷಣೆ ನೀಡಿದ್ದಾರೆ, ನಾವು ಹಲಸಿನ ಹಣ್ಣನ್ನು ಕೊಯ್ಯುವ ಮುನ್ನ ಕೈಗಳ ಮೇಲೆ ಚೆನ್ನಾಗಿ ಎಣ್ಣೆ ಹಚ್ಚಿಕೊಳ್ಳುತ್ತೇವೆ. ಹೀಗೆ ಮಾಡುವುದರಿಂದ ಹಲಸಿನ ಮೇಣ ನಮ್ಮ ಕೈಗೆ ಅಂಟುವುದಿಲ್ಲ. ಹೀಗೆ ನಾವು ಪ್ರಪಂಚವನ್ನು ಪ್ರವೇಶಿಸುವ ಮೊದಲೇ ನಮಗೆ ಆತ್ಮ ಜ್ಞಾನವಿದ್ದರೆ ನಾವು ಪ್ರಪಂಚದ ನಿರ್ವಹಣೆ ಮಾಡಿದರೂ ನಮಗೆ ಅದರಿಂದ ಯಾವುದೇ ಪರಿಣಾಮವಾಗುವುದಿಲ್ಲ. ನಾವು ಪ್ರಪಂಚದ ನಿರ್ವಹಣೆ ಮಾಡಬೇಕೇ ಹೊರತು ಪ್ರಪಂಚವು ನಮ್ಮನ್ನು ನಿಯಂತ್ರಿಸಬಾರದು. ಇಷ್ಟರಮಟ್ಟಿಗೆ ನಾವು ಸ್ವತಂತ್ರ ರಾಗಿರಬೇಕು. ಜೀವನದಲ್ಲಿ ನಮಗೆ ಈ ಸ್ವತಂತ್ರ ಬರುವುದೇ ಈ ಬಗೆಯ ಆಳವಾದ ಸಂಶೋಧನೆಯಿಂದ ಲಭ್ಯವಾಗುವ ಆತ್ಮ ಜ್ಞಾನದಿಂದ.

ಪ್ರಸ್ತುತ, ಎಚ್ಚರಾವಸ್ಥೆಯಲ್ಲಿ ಸೂಕ್ಷ್ಮ ಶರೀರವು ಕಾರ್ಯ ನಿರ್ವಹಿಸುತ್ತದೆ, ಆದರೆ ಶಬ್ದ ಮತ್ತು ಗದ್ದಲಗಳ ದೆಸೆಯಿಂದ ನಾವು ಅದರ ಅಸ್ತಿತ್ವ ವನ್ನು ಪತ್ತೆಹಚ್ಚಲು ಆಗುವುದಿಲ್ಲ. ಆದ್ದರಿಂದ ನಾವು ಅದರ ಸಂಪೂರ್ಣ ಭಾವವನ್ನು ಕಾಣಲು ಸ್ವಪ್ನಾವಸ್ಥೆ ಎಂಬ ಮತ್ತೊಂದು ಅವಸ್ಥೆ ಗೆ ಹೋಗಬೇಕಾಗುತ್ತದೆ. ಸ್ವಪ್ನದಲ್ಲಿ ಸೂಕ್ಷ್ಮ ಶರೀರವು ಪೂರ್ಣ ವಾಗಿ ಪ್ರಕಟವಾಗುತ್ತದೆ. ಇದರ ಬಗ್ಗೆ ಮುಂದಿನ ಶ್ಲೋಕದಲ್ಲಿ ನೋಡೋಣ.

ಸದಾಶಿವ ಸಮಾರಂಭಾಮ್ ಶಂಕರಾಚಾರ್ಯ ಮಧ್ಯಮಾಮ್।ಅಸ್ಮದಾಚಾರ್ಯ ಪರ್ಯಂತಾಮ್ ವಂದೇ ಗುರುಪರಂಪರಾಮ್॥

ಶ್ರೀ ಗುರುಚರಣಾರವಿಂದಾರ್ಪಣಮಸ್ತು...

### ಕಳೆದ ವಾರದ ಚಿಂತನೆ

**ಆಮೆ ಸಿದ್ಧಾಂತ**

ನೀವು ವೇಗವಾಗಿ ಚಲಿಸಬೇಕಾಗಿಲ್ಲ.
ಆದರೆ, ನೀವು ಚಲಿಸುತ್ತಲೇ ಇರಬೇಕು.
ತಾಳ್ಮೆ, ನಿರ್ದೇಶನ ಮತ್ತು ಶಾಂತಿಯೊಂದಿಗೆ.
ಪ್ರಗತಿಗೆ ವೇಗವಲ್ಲ, ಸ್ಥಿರತೆ ಬೇಕು.

ನೀಡಿದವರು – ರೊ. ದೋಮ ಚಂದ್ರಶೇಖರ




ನಮ್ಮ ಕ್ಲಬ್ಬಿನ ಹಿರಿಯ ಸದಸ್ಯರಾದ ರೊ. ಕೆ. ಪಿ. ಭಟ್ ಅವರ ಸ್ಮರಣಾರ್ಥ ಅವರ ಪತ್ನಿ ಶ್ರೀಮತಿ ಶೋಭಾ ಭಟ್ ಅವರು ರೂ. 10,000/– ದೇಣಿಗೆಯನ್ನು ಜಪ್ತಿಯ ಮಾನಸ ಜ್ಯೋತಿ ವಿಶೇಷ ಶಾಲೆಗೆ ನೀಡಿದರು.



Rtn. Dr. S. N. Padiyar 1985-86 & 1986-87 | Rtn. B. Arun Kumar Shetty 1987-88 | Rtn. Dr. H. Rammohan 1988-89 | Rtn. K. Shridhar Kamath 1989-90 | Rtn. Dr. Anand Nayak 1990-91 | Rtn. B. Ramachandra Prabhu 1991-92 | Rtn. G. Santhosh Kumar Shetty 1992-93 | Rtn. Dr. H. A. Vishweshwar 1993-94 | Rtn. Dr. H. R. Hebbar 1994-95



Rtn. K. T. Surendranath
1995-96



Rtn. S. Sadananda Chatra
1996-97



Rtn. B. C. Somayaji
1997-98



Rtn. K. Suresh Kamath
1998-99



Rtn. S. Subraya Halambi
1999-2000



Rtn. S. Vijaya Shetty
2000-01



Rtn. K. Seetharama Nackathaya
2001-02



Rtn. U. S. Shenoy
2002-03



Rtn. Dr. Umesh Puthran
2003-04



Rtn. Dr. B. V. Udupa
2004-05



Rtn. A. Shantharam Pai
2005-06



Rtn. K. Shantharam Prabhu
2006-07

## ಹುಟ್ಟುಹಬ್ಬದ ಶುಭಾಶಯಗಳು



ರೊ. ರಾಘವೇಂದ್ರ ಭಟ್
ದಿನಾಂಕ : ಜನವರಿ 23
ಮೊಬೈಲ್ : 9448151855



ರೊ. ವಿಜಯ ಶೆಟ್ಟಿ
ದಿನಾಂಕ : ಜನವರಿ 24
ಮೊಬೈಲ್ : 9448122171



ರೊ. ಜಾನ್ಸನ್ ಅಲ್ಮೇಡಾ
ದಿನಾಂಕ : ಜನವರಿ 27
ಮೊಬೈಲ್ : 9620288881

## ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು



ತಾ. 23–01–2026ನೇ ಮಂಗಳವಾರದಂದು ತಮ್ಮ ವಿವಾಹ ವಾರ್ಷಿಕೋತ್ಸವವನ್ನು ಆಚರಿಸಲಿರುವ ಪಿಡಿಜಿ ರೊ. ಅಭಿನಂದನ್ ಎ. ಶೆಟ್ಟಿ ಮತ್ತು ಆ್ಯನ್ ನೀತಾ ಶೆಟ್ಟಿ ಇವರಿಗೆ ಕ್ಲಬ್ಬಿನ ಸದಸ್ಯರ ಪರವಾಗಿ ಶುಭಾಶಯಗಳು.
ಮೊ. : 9844065100

It is my pleasure to invite you for a breakfast meeting at our residence at “Chirayu”, NH 66, Hanglur Kundapura between 8-10 am on 21st January, Wednesday.
*Please come without fail .*

**- Rtn. Dr. Umesh Puthran**

## THE ROTARY 4-WAY TEST

1. Is it the truth?
2. Is it fair to all concerned?
3. Will it build goodwill and better friendships?
4. Will it be beneficial to all concerned?

*This Bulletin is sponsored by :*

**Rtn. Ramananda Karanth**
**Mob. : 9986473841**

For Private Circulation only

Email id – rotaryclub.kundapurasouth@gmail.com



Rtn. T. Raghavendra Hatwar 2007-08 | Rtn. K. Shankar 2008-09 | Rtn. S. Jayakar Shetty 2009-10 | Rtn. K. K. Kanchan 2010-11 | Rtn. Abhinandan A. Shetty 2011-12 | Rtn. Vivian Crasto 2012-13 | Rtn. G. Shreedhar Shetty 2013-14 | Rtn. K. P. Bhat 2014-15 | Rtn. P. Vasudeva Karanth 2015-16



Rtn. Aouzline F. Rebello 2016-17 | Rtn. J. Srinath Rao 2017-18 | Rtn. Johnson D' Almeida 2018-19 | Rtn.Devaraj 2019-20 | Rtn. Dr. Uttam Kumar Shetty 2020-21 | Rtn.Mahendr Shetty 2021-22 | Rtn.Sathyanarayana Puranik 2022-23 | Rtn.Suresh Mallya 2023-24 | Rtn. Judith Mendonca 2024-25